ಶ್ರೀ ರಾಮಚಂದ್ರ ಮಿಷನ್®
# ರಾಷ್ಟ್ರೀಯ ವಾರ್ತಾ ಪತ್ರ
ಮೇ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 1 ಸಂಚಿಕೆ ೩

ಪ್ರೀತಿಯ ಸೋದರ-ಸೋದರಿಯರೆ,
ಪ್ರಣಾಮಗಳು.

ದೇಶದೆಲ್ಲೆಡೆಯಿಂದ ಬರುತ್ತಿರುವ ಲೇಖನಗಳ ಅಗಾಧ ಹೆಚ್ಚಳವನ್ನು ಕಾಣುತ್ತಿದ್ದೇವೆ. ನಿಮ್ಮ ಆಸಕ್ತಿ ಮತ್ತು ಭಾಗವಹಿಸುವಿಕೆಗಾಗಿ ಧನ್ಯವಾದಗಳು. ಅನುಭವಗಳನ್ನು ದೇಶದಾದ್ಯಂತ ಎಲ್ಲರೂ ಹಂಚಿಕೊಳ್ಳಲಾಗುವಂತೆ ದಯವಿಟ್ಟು ಅವುಗಳನ್ನು ಕಳಿಸುತ್ತಲೇ ಇರಿ. ಪ್ರಕಟಣಾ ಪರಿವಾರದ ಇತ್ತೀಚಿನ ಸಭೆಯೊಂದರಲ್ಲಿ ಪೂಜ್ಯ ಗುರುಗಳು ನೀಡಿದ ಬುದ್ಧಿವಾದವೆಂದರೆ, ಲೇಖನಗಳು ಸುಲಲಿತವಾಗಿರಬೇಕು, ಓದಲು ಆಸಕ್ತಿ ಹುಟ್ಟಿಸಬೇಕು, ಅವು ಕಠಿಣವಾಗಿರಬಾರದು. ವಾರ್ತಾಪತ್ರಿಕೆಗೆ ಲೇಖನಗಳನ್ನು ಸಿದ್ಧಗೊಳಿಸುವಾಗ ಈ ಅಂಶಗಳಿಗೆ ಗಮನವಿರಲೆಂದು ಕೋರಿಕೆ.

ಜುಲೈ ಪತ್ರಿಕೆಗೆ ವಾರ್ತಾ ಲೇಖನಗಳನ್ನು ಸ್ವೀಕರಿಸಲು ಕಡೆಯ ದಿನಾಂಕ ಜೂನ್ 15, 2008. ಲೇಖನವನ್ನು ಆ ಸಂದರ್ಭದ ಒಂದು ಭಾವಚಿತ್ರದೊಂದಿಗೆ ನಿಮ್ಮ ವಲಯ ಸಂಚಾಲಕರ ಮುಖಾಂತರ ಕಳಿಸತಕ್ಕದ್ದು.

ಗೌರವಾದರಗಳೊಂದಿಗೆ
ಪ್ರಕಟಣಾ ಪರಿವಾರ

## ಮಾರ್ಚ್ ತಿಂಗಳಿನಲ್ಲಿ ಗುರುಗಳ ಪ್ರವಾಸ

### ತಿರುಪ್ಪೂರು ಆಶ್ರಮ ಉದ್ಘಾಟನೆ



ಪೂಜ್ಯಗುರುಗಳು ಫೆಬ್ರವರಿ 28ರಂದು ಕೆಲಕಾಲ ವಿಶ್ರಮಿಸಲು ಹಾಗೂ ಡೈಮಂಡ್ ಜೂಬಿಲಿ ಪಾರ್ಕ್‌ನಲ್ಲಿ ಬೃಹತ್ತಾದ ವಿಶಾಲವಾದ ಧ್ಯಾನಮಂದಿರವನ್ನು ಉದ್ಘಾಟಿಸಲು ತಿರುಪ್ಪೂರಿಗೆ ಆಗಮಿಸಿದರು. ಉದ್ಘಾಟನೆಯು ಮಾರ್ಚ್ 2, 2008ರಂದು ಹಬ್ಬದ ಸಂಭ್ರಮದೊಂದಿಗೆ ನೆರವೇರಿತು. ಅವರು ಮಲೆಯಾಳಂ ಪದಗಳ ಧಾರಾಳ ಬಳಕೆಯೊಂದಿಗೆ ತಮಿಳಿನಲ್ಲಿ ಉಪನ್ಯಾಸ ನೀಡಿದರು. ಅಭ್ಯಾಸಿಗಳು ಹರ್ಷಗೊಂಡರು. ಧ್ಯಾನಮಂದಿರವು ಬೃಹತ್ತಾಗಿ, ಒಳ್ಳೆಯ ವಾತಾಯನವಿದ್ದು, ವಿಶಾಲವಾಗಿ 2500 ಅಭ್ಯಾಸಿಗಳು ಕೂರಲು ಅವಕಾಶವಿದೆ. ಕಟ್ಟಡವು ಸರಳ ಶೈಲಿಯದಾಗಿದ್ದು ಅಗತ್ಯಬಿದ್ದಾಗ ವಿಸ್ತರಿಸಲು ಸಾಧ್ಯತೆ ಇದೆ.

### ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನದ ಆಶ್ರಯತಾನ, ಮಲಂಪುಳ್ಳಾ, ಕೇರಳ



ಮಾರ್ಚ್ 3ರಂದು ಪೂಜ್ಯಗುರುಗಳು ರಸ್ತೆಯ ಮೂಲಕ ಕೇರಳದ ಮಲಂಪುಳ್ಳದಲ್ಲಿ ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನದ ಆಶ್ರಯತಾಣಕ್ಕೆ ಪಯಣಿಸಿದರು. ಅದು ಪಾಲಕ್ಕಾಡಿನ ಹೊರವಲಯದಲ್ಲಿ, ತಿರುಪ್ಪೂರಿನಿಂದ 95 ಕಿ.ಮೀ ಮತ್ತು ಕೊಯಮತ್ತೂರಿನಿಂದ 50 ಕಿ.ಮೀ ದೂರದಲ್ಲಿದೆ. ಅವರು ಶಿಲಾನ್ಯಾಸ ನೆರವೇರಿಸಿದರು. ನಿವಾಸ ಕಟ್ಟಡವನ್ನು ಉದ್ಘಾಟಿಸಿ ಸತ್ಸಂಗ ನಡೆಸಿದರು. ಅದು ನಮ್ಮೆಲ್ಲರನ್ನೂ ಅಜ್ಞಾತ ಜಗತ್ತಿಗೆ ಸಾಗಿಸಿದಂತಿತ್ತು.



### ಕೊಯಮತ್ತೂರು

ಗುರುಗಳ ಕೊಯಮತ್ತೂರು ಭೇಟಿಯು ಮತ್ತೊಂದು ಮಹಾನ್ ಅನಾವರಣ ನೀಡಿತು; ಅವರು ರಸ್ತೆ ಪ್ರಯಾಣದಿಂದ ಬಳಲಿದ್ದರು, ಆದರೆ ಅಭ್ಯಾಸಿಗಳೊಂದಿಗೆ ಇರಲು ಕಾತುರರಾಗಿದ್ದರು. ಪೂಜ್ಯ ಗುರುಗಳು ಅಭ್ಯಾಸಿಗಳ ಬೃಹತ್ ಸಂದಣಿಯನ್ನು "ವ್ಯಕ್ತಿಯೋರ್ವನು ಯಾವುದೇ ಪರಿಸ್ಥಿತಿಯಲ್ಲಿಯೂ ಸಂತೋಷದಿಂದಿರಬಲ್ಲನು" ಎಂದೆನ್ನುತ್ತಾ ಭೇಟಿ ಮಾಡಲು ಹೊರಬಂದರು. ಗುರುಗಳು ಇನ್ನೂ ಹೇಳಿದರು " ನಾನು ಯಾರೂ ಕರೆಯದೇ ಅಥಾವಾ ಆಹ್ವಾನಿಸದಿದ್ದರೂ ನಾನಾಗಿಯೇ ಬರುತ್ತೇನೆ. ನಾನು ಬರಲು ಎರಡು ಕಾರಣಗಳು, ಒಂದು ಈ ಆಶ್ರಮವು ನಿಮ್ಮದೆಂದು ಯೋಚಿಸಬಾರದು, ಅದು ನನ್ನ ಆಶ್ರಮ!". ಅಭ್ಯಾಸಿಗಳು ಕಾರಣಕ್ಕಾಗಿ ಪುನಃ ಪುನಃ ಕೇಳಿದಾಗ ಅವರು ಹೇಳಿದರು " ಬರಲು ಎರಡನೆಯ ಕಾರಣ, ಇದು ಕೇವಲ ಗುರುಗಳ ಆಶ್ರಮವಲ್ಲ, ಇದು ನಮ್ಮ ಆಶ್ರಮ ಎಂದು ಕಲಿಸಲು!".

### ಬೆಂಗಳೂರು



ಮಾರ್ಚ್ 6ರಂದು ಗುರುಗಳು ಕೊಯಮತ್ತೂರಿನಿಂದ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿದರು. 8ರಂದು ಲಾಲಾಜಿ ನಿಲಯದ ಧ್ಯಾನ ಕೇಂದ್ರದ ನಿರ್ಮಾಣ ಕಾರ್ಯವನ್ನು ಪರಿಶೀಲಿಸಿದರು. ಅದು ಅಕ್ಟೋಬರ್ 2008ರಲ್ಲಿ ಪೂರ್ಣಗೊಳ್ಳುವ ಯೋಜನೆ ಇದೆ. ಕಾರ್ಯದ ಪ್ರಗತಿ ಮತ್ತು ನಿರ್ಮಾಣದಲ್ಲಿ ಪಾಲಿಸದಲಾದ ಗುಣಮಟ್ಟದ ಬಗೆಗೆ ಅವರು ಹರ್ಷ ವ್ಯಕ್ತ ಪಡಿಸಿದರು.

ಭಾನುವಾರದಂದು ಬನಶಂಕರಿ ಆಶ್ರಮಕ್ಕೆ ಭೇಟಿ ನೀಡಿದರು. ಅಲ್ಲಿ ಅವರನ್ನು ಭೇಟಿ ಮಾಡಲು 2000 ಅಭ್ಯಾಸಿಗಳು ಸೇರಿದ್ದರು. ಆಶ್ರಮವು ಜನಸಂದಣಿಯಿಂದ ಬಿರಿಯುವಂತಿತ್ತು, ಆದರೂ ಗುರುಗಳು ಹರ್ಷಚಿತ್ತರಾಗಿ ಮೂಲ ವ್ಯವಸ್ಥೆಗೆ ಮಾಡಲಾದ ಸುಧಾರಣೆಗಳನ್ನು ಶ್ಲಾಘಿಸಿದರು. ಬಹು ಸಂಖ್ಯೆಯ ಅಭ್ಯಾಸಿಗಳಿದ್ದರೂ ಸಹ ತಮಗಿಷ್ಟವಾದ ಪಡಸಾಲೆಯುದ್ದಕ್ಕೂ ನಡೆದರು. ಆಶ್ರಮದ ಈ ತಿರುಗಾಟದಲ್ಲಿ ಅವರು ಅನೇಕ ಅಭ್ಯಾಸಿಗಳನ್ನು ಭೇಟಿ ಮಾಡಿದರು; ಅವರೊಂದಿಗಿರಲು ಅವ್ಕಾಶ ನೀಡಿದುದಕ್ಕಾಗಿ ಅಭ್ಯಾಸಿಗಳು ಧನ್ಯರಾದರು.

ಸತ್ಸಂಗದ ನಂತರ ಗುರುಗಳು ಎರಡು ವಿವಾಹಗಳನ್ನು ನೆರವೇರಿಸಿದರು. ನಂತರ ನೀಡಿದ ಉಪನ್ಯಾಸದಲ್ಲಿ ನಮ್ಮ ಆಧ್ಯಾತ್ಮಿಕ ಉನ್ನತಿಗೆ ಸೂಕ್ತವಾಗಿರುವಂತಹ ಸ್ಥಳವನ್ನು ಸೃಷ್ಟಿಸಲು ಸಹಿಷ್ಣುತೆ ಮತ್ತು ನಿಯಂತ್ರಣಗಳ ಅಗತ್ಯತೆಯನ್ನು ತಿಳಿಸಿದರು. ಒಂಭತ್ತರಂದು ಕ್ರೈಸ್ಟ್‌ನಲ್ಲಿ ಯೋಜಿಸಲಾಗಿದ್ದ ಕರ್ನಾಟಕ ಪ್ರಶಿಕ್ಷಕರ ಸಮಾವೇಶದಲ್ಲಿ ಉಪನ್ಯಾಸ ನೀಡಿದರು. ಅವರೆಂದರು "ನಮಗೆ ನಾವು ಪ್ರಾಮಾಣಿಕರಾಗುವುದು ಎಂದು? ನಮ್ಮ ವೇಳೆಯನ್ನು ನಮ್ಮ ಪ್ರಯೋಜನಕ್ಕಾಗಿಯೇ ಬಳಸಬೇಕು. ಪ್ರಾಮಾಣಿಕವಾಗಿ ಶ್ರದ್ಧಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ, ನಮಗೆ ದೊರೆತ ಪ್ರತಿಫಲವೆಂಬ ಭಾವನೆಯಿಂದ, ಅವರಿಗಾಗಿ ಕೆಲಸ ಮಾಡುತ್ತೇನೆಂಬ ಹಳೆಯ ಹುಸಿಯನ್ನು ಮರೆತವರಾಗಿ ಕಾರ್ಯಗತರಾಗಿರಿ. ಅವರಿಗಾಗಿ ಯಾರೂ ಎಂದೂ ಕೆಲಸ ಮಾಡಿಲ್ಲವೆಂಬುದನ್ನು ಪುನರುಚ್ಚರಿಸುತ್ತೇನೆ".

SRCM
# ರಾಷ್ಟ್ರೀಯ ವಾರ್ತಾ ಪತ್ರ
Headquarters

ಮೇ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ1 ಸಂಚಿಕೆ ೩

## ಆಶ್ರಯತಾಣ, ಪನ್‌ಷೆಟ್

ಮಾರ್ಚ್ 14, 2008ರಂದು ಪೂಜ್ಯ ಗುರುಗಳು ಭಾರತದ ಎರಡನೆಯ ಆಶ್ರಯ ತಾಣವನ್ನು ಉದ್ಘಾಟಿಸಿದರು; ಇದು ಮಹಾರಾಷ್ಟ್ರದಲ್ಲಿ ಪುಣೆಯ ಹೊರವಲಯದಲ್ಲಿ ಚಿತ್ತಾಕರ್ಷಕ ಪರಿಸರದಲ್ಲಿ ನೆಲೆದಿದೆ. ಈ ಆಶ್ರಯ ತಾಣವು ಪನ್‌ಷೆಟ್ ಅಣೆಕಟ್ಟಿನ ಖಡಕವಾಸಲ ಸರೋವರದ ದಂಡೆಯ ಮೇಲಿದ್ದು ಬೆಟ್ಟದ ಸಾಲಿನಿಂದ ಆವೃತವಾಗಿದೆ. ಈ ವ್ಯವಸ್ಥೆಯು ಧ್ಯಾನ ಮಂದಿರ, ಪಾಕಶಾಲೆ ಮತ್ತು ಭೋಜನ ಸ್ಥಳ, ನಿವಾಸದ ಕಟ್ಟಡಗಳನ್ನೊಳಗೊಂಡಿದೆ. ಕೇರಳದ ಮಲಂಪುಳ್ಳದಲ್ಲಿ ಇತ್ತೀಚೆಗೆ ಉದ್ಘಾಟಿದವಾದ ಆಶ್ರಯತಾಣದಂತೆಯೆ ಇಲ್ಲಿನ ವ್ಯವಸ್ಥೆಯೂ ಸಹ. ಇಲ್ಲಿ ಆಶ್ರಯ ಪಡೆಯಲು ಬಯಸುವ ಅಭ್ಯಾಸಿಗಳಿಗೆ ಏಪ್ರಿಲ್ 14, 2008ರಿಂದ ತೆರೆಯಲಾಗುವುದು.


CREST Retreat Centre, Panshet

## ಮುಂಬೈನ ಪನ್‌ವೇಲ್ ಆಶ್ರಮ

ಮಾರ್ಚ್ 17ರಂದು ಗುರುಗಳು ಪುಣೆಯಿಂದ ಪನ್‌ವೇಲ್‌ಗೆ ರಸ್ತೆ ಮಾರ್ಗವಾಗಿ ತೆರಳಿದರು. 1400 ಪ್ರೇಮ ಭರಿತ ಹೃದಯಗಳ ಬೃಹತ್ ಸಮೂಹವು ಗುರುಗಳ ದರ್ಶನದಿಂದ ಆನಂದ ಪರವಶರಾದರು. ಎಲ್ಲರಿಗೂ ಕೈ ಬೀಸುತ್ತಾ ಪ್ರತಿಯೊಬ್ಬರನ್ನು ವಯಕ್ತಿಕವಾಗಿ ಹರಸುತ್ತಾ ಚಿಕ್ಕ ಮಕ್ಕಳು ಅವರ ಊರುಗೋಲಿನಿಂದ ತಟ್ಟಿಸಿಕೊಳ್ಳುತ್ತಿದ್ದ ದೃಶ್ಯವು ಮನೋಹರವಾಗಿತ್ತು. ಆಶ್ರಮ ತಲುಪಿದ ಗುರುಗಳು ಸತ್ಸಂಗವನ್ನು ನಡೆಸಿದರು. ಅದೊಂದು ಗಾಢವಾದ ಧ್ಯಾನವಾಗಿದ್ದು ಅಲ್ಲಿದ್ದ ಪ್ರತಿಯೊಬ್ಬರೂ ತೀವ್ರವಾದ ಆದರೆ ಅತಿ ಸೂಕ್ಷ್ಮವಾದ ಪ್ರೇಮದ ಹರಿವನ್ನು ಅನುಭವಿಸಿದರು.



Panvel Ashram - Under the mango trees

ಗುರುಗಳು ಆಶ್ರಮದ ಮೂಲೆ ಮೂಲೆಯನ್ನೂ ನೋಡಿ ಪ್ರತಿ ಕೋಣೆಗೂ ಇಣುಕಿದರು. ನಂತರ ಮೇಲ್ಛಾವಣಿಯಿಂದ 'ಹಸಿರುವಲಯ'ದೆಡೆಗೆ ದೃಷ್ಟಿಹಾಯಿಸಿದರು. 18ರ ಬೆಳಿಗ್ಗೆ ಗುರುಗಳು ಸತ್ಸಂಗ ನಡೆಸಿದ ನಂತರ 'ಹೃದಯವಾಣಿ 2005'ರ ಮರಾಠಿ ಅನುವಾದವನ್ನು ಬಿಡುಗಡೆ ಮಾಡಿದರು. ತದನಂತರ ಗುರುಗಳು ಹಸಿರು ವಲಯಕ್ಕೆ ತೆರೆಳಿ ಸಸಿಯೊಂದನ್ನು ನೆಟ್ಟರು; ತಮ್ಮ ಕಾಟೇಜಿಗೆ ಹಿಂತಿರುಗುವ ಮಾರ್ಗದಲ್ಲಿ ನೆರಳಿನಲ್ಲಿ ಕುಳಿತು ಇಸ್ರೇಲಿನ ಕೆಲ ಅಭ್ಯಾಸಿಗಳೊಂದಿಗೆ ಉಲ್ಲಾಸಭರಿತ ಮಾತುಕತೆಯಲ್ಲಿ ತೊಡಗಿದರು. ಆ ದೇಶಗಳ ಭೇಟಿಯ ಸಂದರ್ಭದಲ್ಲಿ ತಮಗಾದ ಅನುಭವಗಳು ಮತ್ತು ತೊಂದರೆಗಳನ್ನು ವಿವರಿಸಿದರು. ರಾತ್ರಿ 9ರ ಸುಮಾರಿನಲ್ಲಿ ಅವರು ಭೋಜನ ಶಾಲೆಯ ಪಕ್ಕದ ಮೊಗಸಾಲೆಯಲ್ಲಿ ಅಭ್ಯಾಸಿಗಳೊಂದಿಗೆ ಸ್ವಲ್ಪ ಕಾಲ ಕಳೆದರು.



Panvel Ashram - Meditation Hall

ಗುರುಗಳು ಮುಂಬೈಗೆ ಬಂದವೇಳೆಯಲ್ಲಿ ಹೋಳಿಹಬ್ಬವಿದ್ದಿತು. ದುಷ್ಟ ಶಕ್ತಿಗಳು ಮತ್ತು ಅಶುದ್ಧತೆಗಳನ್ನು 'ಹೋಳಿ ಬೆಂಕಿ'ಯಲ್ಲಿ ಭಸ್ಮಮಾಡಿ ಜನರು ಅದರ ಸುತ್ತಲೂ ನರ್ತಿಸಿ ಅದರಿಂದ ಪವಿತ್ರರಾಗುತ್ತಾರೆ. ಹೋಳಿಯು ಜೀವನವನ್ನು ಪುನಶ್ಚೇತನಗೊಳಿಸುವ ಬಣ್ಣಗಳ ಹಬ್ಬ. ಅಲ್ಲಿ ಬಣ್ಣಗಳಿರಲಿಲ್ಲವೆಂಬುದು ಸರಿಯೆ, ಆದರೆ ಪ್ರತಿಯೊಬ್ಬರೂ ವಿವಿಧ ಛಾಯೆಗಳ ಶಾಂತಿ, ಪ್ರೇಮ ಮತ್ತು ಸಂತೋಷಗಳನ್ನು ತಮ್ಮ ಹೃದಯದ ಅಂತರಾಳದಲ್ಲಿ ಅನುಭವಿಸಿದರು.

## ಗೋವ

21ರಂದು ಗುರುಗಳು ಗೋವಾಕ್ಕೆ ಬಂದರು. ಅಲ್ಲಿ ಅವರು ಅಭ್ಯಾಸಿಯೊಬ್ಬರ ಅತಿಥಿ ಗೃಹದಲ್ಲಿ ತಂಗಿದರು; ಅದು ಮಾಂಡೋವಿ ನದಿಯ ದಡದ ಮೇಲಿದೆ. 22ರ ಬೆಳಿಗ್ಗೆ ಹತ್ತಿರದ ಕೇಂದ್ರಗಳಾದ ಹುಬ್ಬಳ್ಳಿ, ಬೆಳಗಾವಿ, ಪುಣೆ, ಮುಂಬೈ ಮತ್ತು ನಾಸಿಕ್‌ಗಳಿಂದ ಆಗಮಿಸಿದ್ದ ಸುಮಾರು 400 ಅಭ್ಯಾಸಿಗಳು ಸೇರಿದ್ದ ಸಭಾಂಗಣಕ್ಕೆ ಹೋದರು.

ಬಾನುವಾರ ಬೆಳಿಗ್ಗೆ ಗುರುಗಳು ಸತ್ಸಂಗವನ್ನು ನಡೆಸಿ ನಂತರ ಕಿರು ಉಪನ್ಯಾಸವನ್ನು ನೀಡಿದರು. ಮುಂದಿನ ಬಾರಿ 500 ಅಭ್ಯಾಸಿಗಳಿದ್ದರೆ ಮಾತ್ರ ಬರುವೆನೆಂದರು "ಪತಿ ಪತ್ನಿಯನ್ನೂ, ಪತ್ನಿಯು ಪತಿಯನ್ನೂ ಒಂದಾಗಿ ಸಿನಿಮಾಕ್ಕೂ ಮಧುಚಂದ್ರಕ್ಕೆ, ಕರೆದೊಯ್ಯುವರಾದರೆ ಇಲ್ಲಿಗೇಕೆ ಕರೆತರಲಾಗುತ್ತಿಲ್ಲ?" ಅವರೆಂದರು, "ಇಲ್ಲಿ ಆಧ್ಯಾತ್ಮಿಕ ಮಧುಚಂದ್ರವಿದೆ. ನಾವು ಪಡೆದುದನ್ನು ಹಂಚಬೇಕು, ಇಲ್ಲವಾದಲ್ಲಿ ಅದು ನಾರುತ್ತದೆ. ನೀಡುವುದರಿಂದಲೇ ಜೀವನ, ಮತ್ತು ದೇವರು ನೀಡುವವರಿಗೇ ಮಾತ್ರವೇ ನೀಡುತ್ತಾನೆ, ನೆನಪಿಡಿ". 23ರ ಸಂಜೆ ಗುರುಗಳು ಕಾಟೇಜಿನಿಂದ ಹೊರ ಬಂದು ನದಿ ದಂಡೆಯಲ್ಲಿ ಆಸೀನರಾದರು. ಸುಮಾರು 40 ಅಭ್ಯಾಸಿಗಳು ಅವರ ದೈವೀ ಪದತಲದಲ್ಲಿ ಮೌನವಾಗಿ ಕುಳಿತಿದ್ದರು. ಸತ್ಸಂಗದ ನಂತರ ಮಳೆಯ ಕಾರಣ ಕಾಟೇಜಿನೊಳಕ್ಕೆ ತೆರಳಿದರು. 24ರ ಬೆಳಿಗ್ಗೆ ಭಾನುವಾರ ಸತ್ಸಂಗ ನಡೆದ ಸ್ಥಳಕ್ಕೆ ತೆರಳಿ, ನಂತರ ಮುಂಬೈ ಮೂಲಕ ಚೆನ್ನೈಗೆ ತೆರಳಲು ವಿಮಾನ ನಿಲ್ದಾಣಕ್ಕೆ ನಿರ್ಗಮಿಸಿದರು.

Master on the banks of the Mandovi, Goa


SRCM ರಾಷ್ಟ್ರೀಯ ವಾರ್ತಾ ಪತ್ರ Headquarters
ಮೇ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ1 ಸಂಚಿಕೆ ೩

### ಲಕ್ನೋನಲ್ಲಿ ಜುಲೈ ೨೪, ೨೦೦೮

ಗುರುಗಳ ಜನ್ಮದಿನೋತ್ಸವವು ಭಾರತದ, ಉತ್ತರ ಪ್ರದೇಶದ ಲಕ್ನೋನಲ್ಲಿ ಜುಲೈ ೨೪, ೨೦೦೮ರಂದು ನಡೆಯಲಿದೆ.

ಈ ಸಮಾರಂಭದ ಸುತ್ತೋಲೆ, ಫ಼ಾರಂಗಳು ಮತ್ತು ವಿವರಗಳು ಮಿಷನ್ನಿನ ವೆಬ್‌ಸೈಟ್‌ನಲ್ಲಿ ಲಭ್ಯ.

http://www.srcm.org/members/24thjuly2008/index.jsp

ಆದಷ್ಟೂ ಶೀಘ್ರವಾಗಿ, ಸಾಧ್ಯವಿದ್ದಲ್ಲಿ ಮೇ ೧೫, ೨೦೦೮ಕ್ಕೆ ಮುನ್ನ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಸಲು ಅಭ್ಯಾಸಿಗಳಿಗೆ ವಿನಂತಿಸಲಾಗಿದೆ.

ಸಮಾರಂಭದ ವ್ಯವಸ್ಥೆಗೆ ನೆರವಾಗಲು ಸ್ವಯಂಸೇವಕರು ಸಮಾರಂಭದ ದಿನಕ್ಕೆ ಕನಿಷ್ಟ ಎರಡು ವಾರ ಮುನ್ನವೇ ಪ್ರಾಂಗಣದಲ್ಲಿ ನೆರೆಯಲು ವಿನಂತಿಸಲಾಗಿದೆ. ಸಮಾರಂಭದ ನಂತರ ಹತ್ತು ದಿನಗಳ ಕಾಲ ಎಲ್ಲವನ್ನೂ ತೆಗೆಯುವ ಕಾರ್ಯಕ್ಕಾಗಿ ಹಲವು ಸ್ವಯಂಸೇವಕರ


### SMSF ಆಶ್ರಯತಾಣಗಳು

ಏಪ್ರಿಲ್ ೧೪, ೨೦೦೮ರಿಂದ ಮಲಂಪುಳ್ಳ ಮತ್ತು ಪನ್ಸ್ಲೇಟ್ ಆಶ್ರಯತಾಣಗಳು ತೆರೆಯಲ್ಪಟ್ಟಿವೆ. ೩ರಿಂದ ೩೦ ದಿನಗಳು ಅಲ್ಲಿ ತಂಗಲು ಬಯಸುವ ಅಭ್ಯಾಸಿಗಳು ಅರ್ಜಿ ಸಲ್ಲಿಸಬಹುದು. ವಿವರಗಳಿಗೆ ಇಲ್ಲಿಗೆ http://sahajmarg.org/welcome/retreat/index.html ಕೊಡಿ.

### ಹೊಸ Mp3 ಸಿ.ಡಿ

"ಅವರು, ಹುಕ್ಕ ಮತ್ತು ನಾನು – ಕತ್ತಲಲ್ಲಿ ಮೂಡಿದ ಬೆಳಕು

ಈ Mp3 ಸಿ.ಡಿ ಯು 'ಅವರು ಹುಕ್ಕ, ಮತ್ತು ನಾನು' ಈ ಆಂಗ್ಲ ೧೮ ಡಿ.ವಿ.ಡಿ ಗಳ ಶಬ್ದಜಾಡನ್ನು ಒಳಗೊಂಡಿದೆ.ಇವು ವಿಶೇಷ ಪ್ರಕಟಣೆಗಾಗಿ ಗುರುಗಳು ನೀಡಿದ ಉಪನ್ಯಾಸಗಳು.




### ಆಶ್ರಮ ನಿರ್ವಹಣೆಗೆ ಸಜ್ಜುಗೊಳಿಸುವ ತರಬೇತಿ ಕಾರ್ಯಕ್ರಮ

ಮೇಲ್ಕಂಡ ಕಾರ್ಯಕ್ರಮದ ಮೊದಲ ಅತಂಡವು ಚೆನ್ನೈನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ಜೂನ್ 1ರಿಂದ ಜೂನ್ 30ರ್ ವರೆಗೆ ನಡೆಯಲಿದೆ. ಆಶ್ರಮ ನಿರ್ವಹಣೆಯ ಎಲ್ಲ ಅಂಶಗಳ ತೀವ್ರ ತರಬೇತಿಯ ಈ ಕಾರ್ಯಕ್ರಮವು ಆಂಗ್ಲ ಭಾಷೆಯಲ್ಲಿರುತ್ತದೆ. ಈ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ಅರ್ಹತೆ:

1. ಅಭ್ಯಾಸಿಯು ಭಾರತವಾಸಿಯಾಗಿರಬೇಕು; ವಯೋಮಿತಿ 19ರಿಂದ 50
2. ಸಹಜಮಾರ್ಗವನ್ನು ಒಂದು ವರ್ಷವಾದರೂ ಸಾಧನೆ ಮಾಡಿರಬೇಕು.
3. ಕಡೇ ಪಕ್ಷ ಒಂದು ಭಂಡಾರದಲ್ಲಿ ಭಾಗವಹಿಸಿರಬೇಕು
4. ವಲಯ / ಕೇಂದ್ರ / ಸಂಚಾಲಕರು / ಪ್ರಶಿಕ್ಷಕರಿಂದ ಸನ್ನಡತೆಯ ಪ್ರಮಾಣಪತ್ರ ಲಗತ್ತಿಸಬೇಕು.
5. ಕಾರ್ಯಕ್ರಮದ ಅವಧಿಯಲ್ಲಿ ಹಣ ಸಹಾಯ ಮತ್ತು ಇತರೆ ರೀತಿಯ ಸಹಾಯವೇನನ್ನೂ ನಿರೀಕ್ಷಿಸಲಾಗದು (ಊಟ ಮತ್ತು ವಸತಿಯನ್ನು ಆಶ್ರಮದಲ್ಲಿ ಉಚಿತವಾಗಿ ನೀಡಲಾಗುವುದು) ಅಗಯದ ವಸ್ತುಗಳನ್ನು ತಮ್ಮ ಖರ್ಚಿಗಾಗಿ ಸಾಕಾಗುವಷ್ಟು ಹಣವನ್ನು ತಾವೇ ತರತಕ್ಕದ್ದು.
6. ಪೂರ್ಣ ಅವಧಿಯಲ್ಲಿ ಅತ್ಯಂತ ಶಿಸ್ತಿನಿಂದಲೂ, ಭಾಗವಹಿಸಲು ಉತ್ಸಾಹಭರಿರಾಗಿಯೂ ಇರತಕ್ಕದ್ದು.
7. 3 ಜನ ವಿದೇಶಿ ಅಭ್ಯಾಸಿಗಳನ್ನೂ ಈ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗುತ್ತದೆ.

ಭಾಗವಹಿಸುವ ಅಭ್ಯಾಸಿಗಳು, ಕಾರ್ಯಕ್ರಮವು ಯಶಸ್ವಿಯಾಗಿ ಮುಗಿದ ನಂತರ ಮಣಪಾಕ್ಕಂ ಅಥವಾ ಭಾರತಾದ್ಯಂತ ಇತರ ಆಶ್ರಮಗಳಲ್ಲಿ ಆಶ್ರರಮ ಉದ್ಯೋಗಿಯಾಗಲು ಅರ್ಹರಾಗುತ್ತಾರೆ. ಅಭ್ಯಾಸಿಗಳು ತಮ್ಮ ಅರ್ಜಿಗಳನ್ನು ಮೇ 10, 2008ರೊಳಗೆ ಆಯಾಯ ವಲಯ / ಕೇಂದ್ರ ಸಂಚಾಲಕರು / ಪ್ರಶಿಕ್ಷಕರ ಮೂಲಕ ಕಳಿಸಬೇಕು. ಆಯ್ಕೆಯಾದವರಿಗೆ ಮೇ 12, 2008ರೊಳಗೆ ತಿಳಿಸಲಾಗುವುದು. ಅವರು ಮೆ 28ರ ವೇಳೆಗೆ ಮಣಪಾಕ್ಕಂ ಆಶ್ರಮದಲ್ಲಿ ಪ್ರಸ್ತುತರಾಗತ್ತಕ್ಕದ್ದು. ಭರ್ತಿಯಾದ ಅರ್ಜಿಗಳನ್ನು ಈ ವಿಳಾಸಕ್ಕೆ ಕಳುಹಿಸಿ.

S. Prakash, Ashram Maintenance Manager,
Babuji Memorial Ashram, Shri Ram Chandra Mission - World Headquarters,
Manapakkam, Chennai - 600 116. India.
Ph: +91 44 4217 1111
Email: prakash@seechangeworld.com
Application Form: http://www.srcm.org/members/forms/amop-appform.pdf

### ಕ್ರೆಸ್ಟ್ ಯುವಜನತೆಗೆ ಸಾಧನ ಕಾರ್ಯಕ್ರಮ

20ರಿಂದ 40 ವಯಸ್ಸಿನ ಅಭ್ಯಾಸಿಗಳಿಗಾಗಿ ಮಾತ್ರವೇ ರೂಪಿಸಲಾದ ಹೊಸ ತರಬೇತಿ ಕಾರ್ಯಕ್ರಮವನ್ನು ತಿಳಿಯಪಡಿಸಲು ಕ್ರೆಸ್ಟ್ ಸಂತೋಷಿಸುತ್ತದೆ. ಈ ಕಾರ್ಯಕ್ರಮವು ಸಾಧನ ಕಾರ್ಯಕ್ರಮದ ರೀತಿಯಲ್ಲಿಯೇ ಯೋಜಿಸಲಾಗಿದ್ದು ಯುವ ಜನತೆಗಾಗಿ ವಿಶೇಷ ವಿಷಯಗಳನ್ನೊಳಗೊಂಡಿರುತ್ತದೆ.

ನಿಯೋಜಿತ ಚರ್ಚೆಯ ಹಲವು ವಿಷಯಗಳೆಂದರೆ ' ಸ್ವಯಂ ಸೇವೆಯ ನೈಜ ಭಾವ', 'ಸಹಜಮಾರ್ಗ ಪದ್ಧತಿಯಲ್ಲಿ ವಿವಾಹ', 'ಉದ್ಯೋಗ ಸ್ಥಳದಲ್ಲಿ ಹಾಗೂ ಮನೆಯಲ್ಲಿ ಸಂಬಂಧಗಳು', 'ಆರ್ಥಿಕ ಯೋಜನೆ', 'ಕುಟುಂಬ ನಿಯಂತ್ರಣ / ಕುಟುಂಬದ ಪ್ರಾಮುಖ್ಯತೆ', ನಿಯೋಜಿತ ಚರ್ಚೆಗಳಾದ, ಧ್ಯಾನ, ಶುದ್ಧೀಕರಣ, ಪ್ರಾರ್ಥನೆ ಮತ್ತು ನಿರಂತರ ಸ್ಮರಣೆ, ಇವು ಸಾಧನ ಕಾರ್ಯಕ್ರಮದಂತೆಯೆ ನಡೆಯುತ್ತವೆ.

ಆಂಗ್ಲ ಭಾಷೆಯಲ್ಲಿ ಈ ತರಬೇತಿ ಕಾರ್ಯಕ್ರಮದ ಆರಂಭಿಕ ಶಿಬಿರವು 2008ರ, ಜೂನ್ 17ರಿಂದ 23ರ ವರೆಗೆ ನಡೆಯಲಿದೆ. 20ರಿಂದ 30 ವಯಸ್ಸಿನ ಎಲ್ಲ ಅಭ್ಯಾಸಿಗಳೂ ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಯೋಗ್ಯರಾಗಿರುತ್ತಾರೆ.

ಅರ್ಜಿಗಳು ದೊರಕುವ ಸ್ಥಳ:
http://sahajmarg.org/welcome/crest/index.html
ಅರ್ಜಿಗಳನ್ನು ಕಳಿಸಲು ಈ–ಮೇಲ್: crest.applications@sahajmarg.org

SRCM
# ರಾಷ್ಟ್ರೀಯ ವಾರ್ತಾ ಪತ್ರ
Zonal Roundup
ಮೇ 2008
ಆಂತರಿಕ ಪ್ರಸಾರಕ್ಕಾಗಿ ಮಾತ್ರ
ಸಂಪುಟ1 ಸಂಚಿಕೆ ೩

## ಮೌಲ್ಯಾಧಾರಿತ ಆಧ್ಯಾತ್ಮಿಕ ತರಬೇತಿ ಕಾರ್ಯಕ್ರಮಗಳು (VBSE)

### ರಾಜಸ್ಥಾನ

ರಾಜಸ್ಥಾನದಲ್ಲಿ 'ಮೌ.ಆ.ತ.ಕಾ'(VBSE)ಗಳು ಆಸ್ಥೆಯಿಂದ ಸ್ವೀಕೃತವಾಗಿದೆ.ರಾಜಸ್ಥಾನ ವಲಯ ಸಂಚಾಲಕಿ ಸ.ರಾಣಿ ಮಿಶ್ರರವರು ಜನವರಿ 13ರಂದು ಕೋಟದಲ್ಲಿ ಅಭ್ಯಾಸಿಗಳಿಗಾಗಿ ಮತ್ತು ಮಾರ್ಚ್ 20 ರಂದು ಜಯಪುರದ ಖಾಟಿಪುರ ಸಕೆಂಡರಿ ಶಾಲೆ ಸ್ಕಾಲರ್ಸ್ ಅಕಾಡಮಿಯಲ್ಲಿ ಕಾರ್ಯಾಗಾರವನ್ನು ನಡೆಸಿದರು. ಶಾಲೆಯ ಡೈರಕ್ಟರ್ ಮತ್ತು ಪ್ರಾಂಶುಪಾಲರು ಸಹ ಕಾರ್ಯಾಗಾರದಲ್ಲಿ ಭಾಗವಹಿಸಿದರು. ಭಾಗವಹಿಸಿದ್ದವರೆಲ್ಲರೂ ಕಾರ್ಯಕ್ರಮವನ್ನು ಬಹುವಾಗಿ ಶ್ಲಾಘಿಸಿದರು.

### ಮದನಪಲ್ಲಿ

ವಿಶ್ವಂ ಬಿ.ಇಡಿ ಕಾಲೇಜಿನ ಪ್ರಾಂಗಣದಲ್ಲಿ ಮಾರ್ಚ್ ಒಂದರಂದು ಒಂದು ಮೌ.ಆ.ತ.ಕಾ ನಡೆಸಲಾಯಿತು. ಸುಮಾರು 110 ವಿಧ್ಯಾರ್ಥಿಗಳು ಭಾಗವಹಿಸಿದ್ದರು. ಸ.ವೆಂಕಟ ರೆಡ್ಡಿಯವರು 'ಮೌಲ್ಯಗಳ ಅಗತ್ಯತೆ' ಬಗ್ಗೆ ಮತ್ತು ಸ.ಬ್ರಹ್ಮಾನಂದ ರೆಡ್ಡಿಯವರು 'ವಿಧ್ಯಾಭ್ಯಾಸದಲ್ಲಿ ಮೌಲ್ಯಗಳ ಅನುಷ್ಠಾನ' ದ ಬಗ್ಗೆಯೂ ಮಾತನಾಡಿದರು. ಭಾಗವಹಿಸಿದವರ ಪ್ರಶ್ನೆಗಳಿಗೆ ಸ.ಬ್ರಹ್ಮಾನಂದ ರೆಡ್ಡಿಯವರು ವಿವರಣೆ ನೀಡಿದರು.

### ಅನಂತಪುರ

ಮಾರ್ಚ್ ತಿಂಗಳಲ್ಲಿ 'ಮೌ.ಆ.ತ.ಕಾ' ತಂಡದವರು ಸ. ಗಾಯತ್ರಿಯವರ ಮಾರ್ಗದರ್ಶನದಲ್ಲಿ ಸ್ಥಳೀಯ ಶಾಲೆಗಳಿಗೆ ಭೇಟಿ ಇತ್ತು ಮೌಲ್ಯಾಧಾರಿತ ಪದ್ಧತಿಯ ಪ್ರಾಮುಖ್ಯತೆಯನ್ನು ವಿವರಿಸಿದರು. ಶಾಲೆಯ ಕಾರ್ಯನಿರ್ವಾಹಕರು ತಮ್ಮ ಶಾಲೆಗಲಲ್ಲಿ ಮೌ.ಆ.ತ.ಕಾ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಸಕ್ತಿತೋರಿದರು.

## ಧ್ಯಾನದ ಮೂಲಕ ಒತ್ತಡ ನಿವಾರಣೆ

ಕರ್ನಾಟಕ ಪೋಲೀಸು ಅಕಾಡಮಿ, ಮೈಸೂರು – ಇಲ್ಲಿ 'ಧ್ಯಾನದ ಮೂಲಕ ಒತ್ತಡ ನಿವಾರಣೆ' ಬಗ್ಗೆ ಬೆಂಗಳೂರು ಕೇಂದ್ರದ ಭಾಸ್ಕರ್ ರಾವ್‌ರವರು ಉಪನ್ಯಾಸ ನೀಡಿದರು. ಅಕಾದಮಿಯಲ್ಲಿ ಪುನಃಚೇತನ ಶಿಬಿರದಲ್ಲಿ ಕರ್ನಾಟದ ಪೋಲೀಸು ಅಧಿಕಾರಿಗಳಿಗಾಗಿ ಇದನ್ನು ನಿಯೋಜಿಸಲಾಗಿತ್ತು.

ಯುಕ್ತ ಸಿದ್ಧತೆಯಿಂದ ಆಸಕ್ತಿಯುತ ಮತ್ತು ಇಂದಿಗೆ ಅಗತ್ಯವಾದ ಈ ವಿಷಯದ ಬಗ್ಗೆ ತಮ್ಮ ಪರಿಣಾಮಕಾರಿ ವಾಕ್‌ಝರಿಯಿಂದ ಸ.ಭಾಸ್ಕರರಾವ್‌ರವರು ಒತ್ತಡ ಭರಿತ ಬಾಹ್ಯ ಜೀವನ, ಕೆಲಸದ ಒತ್ತಡಗಳು, ಮಾನವನು ಎದುರಿಸುತ್ತಿರುವ ಅನೇಕ ಋಣಾತ್ಮಕ ಪರಿಣಾಮಗಳೊಂದಿಗೆ, ವ್ಯಕ್ತಿಯೋರ್ವನು ಧ್ಯಾನದ ಮೂಲಕ ಸಾಧಿಸಬಹುದಾದ ಆಂತರಿಕ ಶಾಂತಿ ಮತ್ತು ಪ್ರಸನ್ನತೆಯನ್ನು ವಿಷದೀಕರಿಸಿದರು. ಅವರು ' ಒತ್ತಡ', 'ಮನಸ್ಸು', 'ಗುರಿ' ಮತ್ತು 'ಚರಮಗುರಿ' ಇವುಗಳ ಬಗ್ಗೆ ಒತ್ತು ನೀಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉನ್ನತ ಪೋಲೀಸು ಅಧಿಕಾರಿಗಳು ಸಂಪೂರ್ಣವಾಗಿ ಪಾಲ್ಗೊಂಡು ಪರಸ್ಪರ ಚರ್ಚೆಗೆ ಅನುವುಮಾಡಿತು. ಸಭೆಯು ಪ್ರಶ್ನೋತ್ತರಗಳೊಂದಿಗೆ ಮುಕ್ತಾಯವಾಯಿತು.



## ಒತ್ತಡ ನಿರ್ವಹಣೆಯ ಬಗ್ಗೆ ಉಪನ್ಯಾಸ

### IFFCO, ಕಲೋಲ್, ಗುಜರಾತ್

ಟೆಕ್ನೋಕ್ರಾಫ್ಟ್ ಫೋರಂ ಆಫ್ ಇಂಡಿಯನ್ ಫಾರ್ಮರ್ಸ್ ಫರ್ಟಿಲೈಜರ್ಸ್ ಕೋಆಪರೇಟಿವ್‌ಲಿ (IFFCO) ಕಲೋಲ್ ಇವರ ಆಶ್ರಯದಲ್ಲಿ ತಯಾರಿಕ ಘಟಕದ ಒಳಗಿರುವ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಮರ್ಚ್ 18ರಂದು ಸ. ರಾಜಗೋಪಾಲನ್‌ರವರು ಒತ್ತಡ ನಿರ್ವಹಣೆಯ ಬಗ್ಗೆ ಉಪನ್ಯಾಸ ನೀಡಿದರು.

100ಕ್ಕೂ ಮೀರಿದ ಇಫ್ಕೊ ಕಾರ್ಯವರ್ಗದವರು ಭಾಗವಹಿಸಿದ್ದರು. ಸಹಪ್ರಧಾನ ನಿರ್ವಾಹಕರು, ಉಪಪ್ರಧಾನ ನಿರ್ವಾಹಕರು ಸೇರಿದ್ದರು. ಕೆಲಸಗಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿ ಅನೇಕರು ಸಹಜಮಾರ್ಗ ಧ್ಯಾನ ಪದ್ಧತಿ ಆರಂಭಿಸಲು ಆಸಕ್ತಿ ತೋರಿದರು.



## ಭಾರತೀಯ ಜೀವ ವಿಮಾ ಸಂಸ್ಥೆ

ಜಯಪುರದ ಭಾ.ಜೀ.ವಿ.ಸಂ. ರವರು ತಮ್ಮ ಮಾನವ ಸಂಪನ್ಮೂಲ ವಿಭಾಗದ ಕಾರ್ಯಕ್ರಮದ ಅಡಿಯಲ್ಲಿ ಧ್ಯಾನ ಮತ್ತು ಒತ್ತಡ ನಿರ್ವಹಣೆಯ ಬಗ್ಗೆ ಪರಿಚಯಿಸಲು ನಮ್ಮ ಮಿಷನ್ನಿಗೆ ಆಹ್ವಾನ ನೀಡಿದರು. ಅವರ ಎರಡು ದಿನದ ಕಾರ್ಯಕ್ರಮದಲ್ಲಿ ನಮಗೆ 90 ನಿಮಿಷಗಳ ಮೊದಲನೇ ಅಧಿವೇಶನ ನಡೆಸಲು ಕರೆ ನೀಡಿದರು. ಪ್ರಸ್ತುತಿಯಲ್ಲಿ ಮ್ಯುಖ್ಯವಾಗಿ 'ಧ್ಯಾನವೆಂದರೇನು', ಧ್ಯಾನದಿಂದ ಲಾಭಗಳು', 'ಸಹಜಮಾರ್ಗ ಏನನ್ನು ನೀಡುತ್ತದೆ' ಮತ್ತು 'ಸಹಜಮಾರ್ಗ ಧ್ಯಾನವನ್ನು ಆರಂಭಿಸುವುದು ಹೇಗೆ', ಈ ವಿಚಾರಗಳಿಗೆ ಒತ್ತು ನೀಡಲಾಯಿತು. ಜಯಪುರದ ಭಾ.ಜೀ.ವಿ.ಸಂ ಯ ಕೆಲಸಗಾರರೆಲ್ಲರಿಗೂ ಅನೇಕ ಗುಂಪುಗಳಲ್ಲಿ ಸ.ಸಂಜೀವ ಸಿಂಗ್‌ರವರು ಕಾರ್ಯಕ್ರಮದ ವ್ಯವಸ್ಥೆ ಮಾಡಿದ್ದರು. ಹಿಂದಿನ ಮೂರು ತಿಂಗಳುಗಳಲ್ಲಿ ಸುಮಾರು 14 ಶಿಬಿರಗಳ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಶಿಬಿರಗಳಲ್ಲಿಯೂ ಭಾಗವಹಿಸಿದ್ದವರು ಅತ್ಯಂತ ಉತ್ಸಾಹ ತೋರಿ ಈ ಪದ್ಧತಿಯಲ್ಲಿ ಧ್ಯಾನ ಪ್ರಾರಂಭಿಸಲು ಉದ್ಯುಕ್ತರಾಗಿರುತ್ತಾರೆ.



## ವಲ್ಸಾಡ್, ದಮನ್‌ನ ಭೂನೋಂದಣಿ

### 25 ಫೆಬ್ರವರಿ

ಸಹೋದರ ಬಾಜಪಯಿ (ಕಾರ್ಯದರ್ಶಿ) ರವರು ಆಶ್ರಮದ ಸ್ಥಳವನ್ನು ಪರಿಶೀಲಿಸಿದ ನಂತರ ಭವಿಷ್ಯತ್ತಿನ ರಚನಾಯೋಜನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ಒದಗಿಸಲಾಯಿತು. ವಲ್ಸಾಡ್, ವಾಪಿ, ಖೇರ್‌ಗಾಂವ್, ನವ್ಸಾರಿ ಮತ್ತು ಬರ್ದೋಲಿ ಕೇಂದ್ರಗಳಿಂದ ಸುಮಾರು 100 ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಂಡಿದ್ದರು. ಸ್ಥಳದಲ್ಲಿ ಪೂಜ್ಯ ಗುರುಗಳ ಸಾನಿಧ್ಯವನ್ನು ಸೂಚಿಸುವ ಒಂದು ರೀತಿಯ ಪರಿಚಿತ ಸ್ತಬ್ಧತೆಯ ಚೈತನ್ಯಕಾರಿಯಾಗಿ ಸಮೃದ್ಧವಾಗಿ ಆವರಿಸಿತ್ತು.

ಸಹೋದರ ಸುರೇಶ್, ಶ್ರೀ ಬಾಜಪಯಿ ಮತ್ತು ಡಾ. ಸುರೇಂದ್ರ ಅಗರವಾಲ್ (ಉಪವಲಯ ಸಂಘಕಟಕರು). ಸಂಭ್ರಮಯುತ ವಾತಾವರಣದಲ್ಲಿ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಹೋದರ ಹಿತೇಶ್ (ಕೇಂದ್ರದ ಮುಖ್ಯಸ್ಥ) ವಂದನಾರ್ಪಣೆ ಮಾಡಿದರು.

### ಏಪ್ರಿಲ್6, 2008

ಮುಖಿಯ, ತಲಾತಿಯಂತಹ ಹಳ್ಳಿಗಳಿಂದ ಸುಮಾರು 100 ಹಳ್ಳಿಗರೂ ಸೇರಿದಂತೆ ಸ್ಥಳೀಯ ಶಾಸಕರು ಮತ್ತು ಇತರೆ ಪ್ರಭಾವಶಾಲಿ ವ್ಯಕ್ತಿಗಳನ್ನು ವಲ್ಸಾಡ್ ಆಶ್ರಮದಲ್ಲಿ ನಡೆದ ಮುಕ್ತ ಸಭೆಗೆ ಭಾನುವಾರ, ಏಪ್ರಿಲ್ 6ರಂದು ಆಹ್ವಾನಿಸಲಾಗಿತ್ತು. ಮತ್ತು ವಲ್ಸಾಡ್, ವಾಪಿ, ಖೇರ್‌ಗಾವ್, ಉಮರ್ಗಳಿಂದ ಸುಮಾರು 100 ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದ್ದರು.

ಒಂದುವರೆ ಎಕರೆ ಜಾಗವನ್ನು ಆಧ್ಯಾತ್ಮಿಕ ಮತ್ತು ದೈವಿಕ ಕಾರಣಕ್ಕಾಗಿ ಖರೀದಿಗೆ ನೀಡಿದ ಭೂಮಾಲೀಕರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ನಾವು ಯಾವುದೇ ಒಂದು ಧರ್ಮ, ಮತ ಅಥವಾ ಪಂಥಕ್ಕೆ ಸೇರಿದವರಲ್ಲವೆಂದು, ನಾವಿಲ್ಲಿ ಮತಾಂತರ ಮಾಡುತ್ತಿಲ್ಲವೆಂದು ನಿವೇದಿಸಲಾಯಿತು.

ಮಾನವ ಗುಣಗಳ ವರ್ಧನೆಯೊಂದಿಗೆ ನಮ್ಮನ್ನು ಉತ್ತಮ ಮಾನವರನ್ನಾಗಿ ಮಾಡುವ 'ಸಹಜ ಮಾರ್ಗ ಸಾಧನೆಯ' ಯತ್ನದ ಬಗ್ಗೆ ಅರಿತು ಗ್ರಾಮಸ್ಥರು ಸಂತಸಿತರಾದರು.ಆಧ್ಯಾತ್ಮದ ಮೂಲ ತತ್ವ ಹಾಗೂ ಧರ್ಮಗಳ ಸಮಾನತೆ / ವೈರುಧ್ಯಗಳನ್ನು ಪ್ರತಿಪಾದಿಸಲಾಯಿತು. ನಂತರ ಅಲ್ಲಿ ಸೇರಿದ್ದ ಸುಮಾರು 300 ಜನರಿಗೆ ಭೋಜನದ ವ್ಯವಸ್ಥೆಯಾಗಿತ್ತು.

ವಲ್ಸಾಡ್ ಆಶ್ರಮದ ಸ್ವತ್ತಿನ ಸಂರಕ್ಷಣೆ, ವಿಕಾಸ ಮತ್ತು ಉಪಯೋಗಕ್ಕೆ ಆಶಾದಾಯಕವಾಗಿ ಅನೇಕ ಗ್ರಾಮಸ್ಥರೂ ಅಭ್ಯಾಸವನ್ನು ಶುರು ಮಾಡಲು ತೀವ್ರ ಆಸಕ್ತಿಯನ್ನು ವ್ಯಕ್ತ ಪಡಿಸಿದರು.



## ಮಾಕ್ಕಳ ಪೋಷಣೆಯಲ್ಲಿ ಪಾಲಕರ ಪಾತ್ರ

### ಇಂದೋರ್ ಕೇಂದ್ರ

ಪೂಜ್ಯ ಗುರುಗಳ ಸಲಹೆಯಂತೆ ಅಭ್ಯಾಸಿ ಪಾಲಕರಲ್ಲಿ ತಮ್ಮ ಮಕ್ಕಳ ಪೋಷಣೆಯಲ್ಲಿ ಅವರ ಪಾತ್ರ ಕುರಿತು, ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಅರ್ಧ ದಿನದ ಶಿಬಿರವನ್ನು ಫೆಬ್ರವರಿ 24ರಂದು, ಇಂದೋರ್‌ನಲ್ಲಿ ಏರ್ಪಡಿಸಲಾಗಿತ್ತು. ವಿಶೇಷವಾಗಿ ಪೂಜ್ಯ ಲಾಲಾಜಿ, ಪೂಜ್ಯ ಬಾಬೂಜಿ ಮತ್ತು ಗುರುಗಳ ಸಾಹಿತ್ಯವನ್ನು ಓದಲಾಯಿತು ಹಾಗೂ ಪೋಷಕರ ಪಾತ್ರದ ಬಗೆಗಿನ ಅದರಲ್ಲಿನ, ಸಮಂಜಸವಾದ ಭಾಗಗಳನ್ನು ಪ್ರಸ್ತುತ ಪಡಿಸಲಾಯಿತು.

ಸಹೋದರಿ ಯಾಮಿನಿ ಕಾರ್ವೇಅರ್ ಮತ್ತು ಸಹೋದರ ರಾಜೇಶ್ ಕಾರ್ವೇಅರ್‌ರವರು ಈ ಕಾರ್ಯಕ್ರಮದ ಆಯೋಜಕರಾಗಿದ್ದರು. ಈ ಶಿಬಿರವು ಮೂರು ಭಾಗಗಳಲ್ಲಿ ವಿಸ್ತರಿಸಿತ್ತು. ಮೊದಲ ಭಾಗದಲ್ಲಿ ಪಾಲಕರು ಮತ್ತು ಮಗುವಿನ ಸಂಬಂಧದ ಅನೇಕ ಅಂಶಗಳ ಬಗ್ಗೆ ಗುಂಪುಗಳಲ್ಲಿ ಚರ್ಚೆ ನಡೆಯಿತು. ಅನಂತರ ಸಂಘಟಕರು ಮತ್ತು ಭಾಗಿಗಳ ನಡುವೆ ಪರಸ್ಪರ ಚರ್ಚೆ ನಡೆಯಿತು. ಮೂರನೆಯ ಭಾಗವು ಸಹೋದರ ನಿರ್ಮಲ್ ಮತ್ತು ವಲಯನಿರ್ವಾಹಕ ಹಾಗೂ ಶಾಸಕರಾದ ಸಹೋದರ ವಿಕಲ್ ಮಂಜ್ರಾರವರವ ಪ್ರತಿಕ್ರಿಯೆಗಳಲ್ಲಿ ಮುಕ್ತಾಯವಾಯಿತು.

ಈ ವಿಷಯದ ಬಗೆಗಿನ ಗುರುಗಳ ಬೋಧನೆಗಳನ್ನು ಕಾರ್ಯರೂಪಕ್ಕೆ ತರುವುದರಿಂದ ಮಾತ್ರೆ ಪ್ರಾಮಾಣಿಕವಾಗಿ ಶುದ್ಧ ಮನಸ್ಸಿನಿಂದ ಸಾಧನೆಯನ್ನು ಮಾಡುವ ಪ್ರಯತ್ನದಿಂದ ಹಾಗೂ ನಮ್ಮ ನಡವಳಿಕೆಯಲ್ಲಿ ಬದಲಾವಣೆ ತರುವುದರಿಂದ ನಮ್ಮ ಮಕ್ಕಳ ಮೇಲೆ ಸಕಾರತ್ಮಕ ಪರಿಣಾಮ ಬೀರಬಹುದೆನ್ನುವ ವಿಷಯಗಳು ಈ ಶಿಬಿರದ ಫಲಿತಾಂಶವಾಗಿತ್ತು.



ಮಕ್ಕಳು ಕೌಟುಂಬಿಕ ಸಾಮರಸ್ಯ, ಶಾಂತಿ ಮತ್ತು ಅದ್ಭುತ ಕಾರ್ಯಕರ್ತರು. ಮಕ್ಕಳು ಸಂತೋಷಕ್ಕೆ ಅತ್ಯಗತ್ಯವಾದ ಬೆಳಕು ಮತ್ತು ನಗುವನ್ನು ನಮ್ಮ ಜೀವನದಲ್ಲಿ ತರುತ್ತಾರೆ. ಅವರು ಭವಿಷ್ಯವನ್ನು ಪ್ರತಿನಿಧಿಸುತ್ತಾರೆ. ಕೇವಲ ತಾಣು ಜನಿಸಿದ ಕುಟುಂಬವನ್ನಷ್ಟೇ ಅಲ್ಲ ಆದರೆ ಅವರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ದೇಣಿಗೆ ನೀಡುವ ಇಡೀ ಮಾನವ ಕುಲವನ್ನು ಪ್ರತಿನಿಧಿಸುತ್ತಾರೆ. ಆದ್ದರಿಂದ ನಾವು ಮಾನವ ಕುಲದ ಭವಿಷ್ಯಿವನ್ನು ರೂಪಿಸಲು ಒಂದು ಖಚಿತ ವಿಧಾನವನ್ನು ಪಾಲಿಸೋಣ.

ಪಿ.ರಾಜಗೋಪಾಲಚಾರಿ

ಅಧ್ಯಕ್ಷ, 'ಕೃಷ್ಣ', Down Memory lane, ಆವೃತ್ತಿ ೨



SRCM

# ರಾಷ್ಟ್ರೀಯ ವಾರ್ತಾ ಪತ್ರ

Zonal Roundup

ಮೇ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ1 ಸಂಚಿಕೆ ೩

## ಇಂದೋರ್ ಕೇಂದ್ರದಲ್ಲಿ ಹೊಸದಾಗಿ ಸೇರ್ಪಡೆಯಾದವರಿಗಾಗಿ ಕಾರ್ಯಕ್ರಮ

"ಒಬ್ಬ ಕುರುಬನಿಗೆ ಮನೆಯಲ್ಲಿನ ನೂರು ಕುರಿಗಳ ಕಡೆಗೆ ಲಕ್ಷ್ಯವಿರದೆ ಆ ಕ್ಷಣದಲ್ಲಿ ಕಳೆದಿರುವ ಒಂದು ಕುರಿಯ ಕಡೆಗೆ ಗಮನವಿರುತ್ತದೆ. ಆದ್ದರಿಂದ ಪ್ರೀತಿಯು ಸಿಗದಿರುವುದರ ಬಗ್ಗೆ ಚಿಂತಿಸುತ್ತದೆ".

ಬಾಬೂಜಿ, ಸಹಜಮಾರ್ಗ ಸಿದ್ಧಾಂತಗಳು–೧೦



ಇಂದೋರ್ ಕೇಂದ್ರದಲ್ಲಿ ಅನೇಕ ಜನರು ಈ ಪದ್ಧತಿಯನ್ನು ಸೇರುತ್ತಿರುವುದು ಮತ್ತು ಕೆಲ ಕಾಲದ ನಂತರ ಅನೇಕರು ಬಿಟ್ಟುಬಿಡುವುದನ್ನು ಗಮನಿಸಲಾಗಿದೆ. ಇದರ ಕಾರಣಗಳು ಹಲವು, ಕೇಂದ್ರದಲ್ಲಿ ಹೀಗೆ ತೊರೆಯುವವರ ಸಂಖ್ಯೆಯನ್ನು ಕಡಿಮೆ ಮಾಡುವ ಅಗತ್ಯವನ್ನು ತಿಳಿದು ಇಂತಹ ಸಮಸ್ಯೆಯನ್ನು ಬಗೆಹರಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಜನವರಿ ೨೦೦೭ರ ನಂತರ ಹೊಸದಾಗಿ ಮಿಷನ್ನನ್ನು ಸೇರಿದ ಸಹೋದರ ಸಹೋದರಿಯರ ಸಲುವಾಗಿ "ಸಾಧನಾ ಪೂರ್ಣ ಕಾರ್ಯಕ್ರಮ"ವನ್ನು ಮಾರ್ಚ್ ೨೩, ೨೦೦೮ರಂದು ಏರ್ಪಡಿಸಲಾಗಿತ್ತು.

ಸುಮಾರು ೫೦ ಅಭ್ಯಾಸಿಗಳು ಈ ಕಾರ್ಯಕ್ರಮಕ್ಕೆ ಹಾಜರಿದ್ದರು. ಶಿಬಿರದ ವಾತಾವರಣವು ಸ್ನೇಹಪರವಾಗಿಯೂ ಹಿತಕರವಾಗಿಯೂ ಇದ್ದಿತು. ಸಹೋದರ ಅವಿನಾಶ್ (ಕೇಂದ್ರದ ಮುಖ್ಯಸ್ಥ, ಇಂದೋರ್) ಮತ್ತು ಸಹೋದರ ನಿರ್ಮಲ್ ದಗ್ಧಿಯವರು ಸಾಧನೆಯ ಬಗ್ಗೆ ಸಂಪೂರ್ಣ ಪರಿಚಯ ನೀಡಿದರು. ಅವರು ಸಹಜ ಮಾರ್ಗ ಸಾಧನೆಯ ಅನೇಕ ಅಂಶಗಳ ಕುರಿತು ವಿಸ್ತಾರವಾದ ವಿವರಣೆಗಳನ್ನು ನೀಡಿದರು ಹಾಗೂ ನಿಯಮಿತತೆಯ ಅಗತ್ಯವನ್ನೂ, ಈ ಮಾರ್ಗದ ಸರಳತೆಯನ್ನು ಒತ್ತು ಹೇಳಿದರು. ಈ ಅಂಶಗಳನ್ನು ತಿಳಿಸಲು ಮಾಡಿದ ಪ್ರಸ್ತುತಿಯು ಕಾರ್ಯಕ್ರಮವನ್ನು ಆಸಕ್ತಿಯುತ ಹಾಗು ಉತ್ಸಾಹಭರಿತ ವನ್ನಾಗಿ ಮಾಡಿತು. ಕೊನೆಯಲ್ಲಿ ನಡೆದ ಪ್ರಶ್ನೋತ್ತರ ಭಾಗವನ್ನು ಡಾ. ಸಿ.ಸಿ. ಶರ್ಮಾರವರು ನಿರ್ವಹಿಸಿದರು.

Youth Workshop, Coimbatore



## ಅಭ್ಯಾಸಿ ತರಬೇತಿ ಕೇಂದ್ರ

### (Johrat) ಕೇಂದ್ರ

ಏಪ್ರಿಲ್ 8 ರಂದು ಜೊರ್ಹಟ್ ಕೇಂದ್ರದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜೊರ್ಹಟ್, ನಜೀರ, ಸಿಬಸಾಗರ ಮತ್ತು ದಿಫು ಕೇಂದ್ರಗಳ ಅಭ್ಯಾಸಿಗಳು ಭಾಗವಹಿಸಿದ್ದರು. ಅಭ್ಯಾಸಿಗಳ ಹೊರತಾಗಿ ಜೊರ್ಹಟ್ ಇಂಜಿನಿಯರಿಂಗ ಕಾಲೇಜಿನಲ್ಲಿ ಓದುವ 4 ಇಂಜಿನಿಯರಿಂಗ್ ವಿಧ್ಯಾರ್ಥಿಗಳು ಮತ್ತು ಕೆಲವು ಸ್ನೇಹಿತರು ಹಾಗೂ ಸಂಬಂಧಿಕರು ಕೂಡ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮವು ಸತ್ಸಂಗದಿಂದ ಪ್ರಾರಂಭವಾಯಿತು.

ಗುವಹಾಟಿ ಕೇಂದ್ರದ ಸಹೋದರ ಅಶೋಕ್ ಸೇನ್‌ಗುಪ್ತ ತರಬೇತಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಸ್ಲೈಡ್ ಶೋ ಮೂಲಕ ಅವರು ಗುರು, ಮಿಷನ್ ಮತ್ತು ಮಾರ್ಗಗಳ ಬಗ್ಗೆ ವಿವರಿಸಿದರು. ಆರು ಮುಖ್ಯ ಅಂಶಗಳಾದ ಮುಂಜಾನೆಯ ಧ್ಯಾನ, ಶುದ್ಧೀಕರಣ, ರಾತ್ರಿಯ ಪ್ರಾರ್ಥನೆ, ಸತ್ಸಂಗ, ವೈಯಕ್ತಿಕ ಬೈಠಕ್‌ಗಳು, ಪ್ರೇಮ ಮತ್ತು ಗುರುಗಳ ಪ್ರತಿ ಸಮರ್ಪಣಾ ಭಾವ – ಇವುಗಳ ಸಹಾಯದಿಂದ ಹೇಗೆ ಪರಿಶುದ್ಧವಾಗಿ ಸಾಧನೆ ಮಾಡಬಹುದೆಂಬುದು ಇದರ ಗುರಿಯಾಗಿತ್ತು.

ಈ ಮೇಲಿನವುಗಳಲ್ಲಿ ಒಂದನ್ನು ನಡೆಸಿಲ್ಲವಾದರೂ ಸರಿಯಾದ ಮುನ್ನಡೆ ಸಾಧಿಸಲಾಗುವುದಿಲ್ಲವೆಂದು ಒತ್ತಿಹೇಳಲಾಯಿತು. ಪ್ರಸ್ತುತಿಯ ನಂತರ ಆಸಕ್ತಿಯುತ ಪ್ರಶ್ನೋತ್ತರ ಕಾರ್ಯಕ್ರಮವು ಒಂದು ಗಂಟೆಯ ಕಾಲ ನಡೆಯಿತು. 4:30ರ ಸಮೂಹ ಧ್ಯಾನದ ನಂತರ ಕಾರ್ಯಕ್ರಮವು ಮುಕ್ತಾಯವಾಯಿತು.



## ಯುವಜನ ಶಿಬಿರ

### ಕೊಯಮತ್ತೂರು ಜನವರಿ 25,26 ಮತ್ತು 27, 2008

ಕೊಯಮತ್ತೂರು ಆಶ್ರಮದಲ್ಲಿ ನಡೆಸಿದ ಎರಡು ದಿನಗಳ ಯುವಜನ ಶಿಬಿರದ ವಿಷಯ "ಭವಿಷ್ಯವು ಅಂತರಂಗದಲ್ಲಿದೆ" ಎಂಬುದಾಗಿತ್ತು. ಕೊಯಮತ್ತೂರು, ಊಟಿ, ಪೊಳ್ಳಾಚಿ ಮತ್ತು ಚೆನ್ನೈನಿಂದ 35 ಅಭ್ಯಾಸಿಗಳು ಭಾಗವಹಿಸಿದ್ದರು. ಗುರುಗಳೇ ಸ್ವತಃ ಈ ಕಾರ್ಯಕ್ರಮವ ಜವಾಬ್ದಾರಿ ವಹಿಸಿಕೊಂಡಂತೆ ಭಾಸವಾಗಿತ್ತು ಹಾಗೂ ಸೂಕ್ಷ್ಮವಾದ ಸ್ಥಬ್ಧತೆ ಮಾತ್ತು ಹರ್ಷದಾಯಕ ವಾತಾವರಣವಿತ್ತು.

"ದರ್ಶನ, ದರ್ಶನ ಕಾಣುವ ಮಾರ್ಗ ಮತ್ತು ಬದಲಾವಣೆ"ಯಂಥ ವಿಷಯಗಳನ್ನು ಪ್ರಶ್ನಾವಳಿ, ಗುಂಪುಚರ್ಚೆ, ಪ್ರಶ್ನೋತ್ತರಗಳ ಮುಖಾಂತರ ಚರ್ಚಿಸಲಾಯಿತು ಹಾಗೂ 'ಹಿ, ದಿ ಹುಕ್ಕಾ ಅಂಡ್ ಐ' ನ ವೀಡಿಯೋ ತೋರಿಸಲಾಯಿತು.

"ದೈವಿಕ ಯೋಜನೆಯಂತೆ ನಾವು ಭವಿಷ್ಯವನ್ನು ರೂಪಿಸಲು ವರ್ತಮಾನದಲ್ಲೇ ಏನಾದರೂ ಮಾದಬೇಕು" ಮತ್ತು ಅದನ್ನು 'ಇಲ್ಲೇ, ಈಗಲೇ' ಮಾಡಬೇಕು ಎಂಬ ಸಂದೇಶವನ್ನು ಪ್ರೇಕ್ಷಕರು ಮೂಕವಿಸ್ಮಿತರಾವಂತೆ ತಿಳಿಸಲಾಯಿತು ಹಾಗೂ ಇದರಿಂದ ಕಾರ್ಯಕ್ರಮದ ಉದ್ದೇಶ ಸಫಲವಾಯಿತು.

SRCM
# ರಾಷ್ಟ್ರೀಯ ವಾರ್ತಾ ಪತ್ರ
ಮೇ 2008 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ1 ಸಂಚಿಕೆ ೩

## ಪ್ರಾದೇಶಿಕ ಕೂಟ – ಮಧುಗಿರಿ

ತುಮಕೂರು ಜಿಲ್ಲೆಯ ಮಧುಗಿರಿಯು ಬೆಂಗಳೂರಿನಿಂದ 105 ಕಿ.ಮೀ ದೂರವಿರುವ ತಾಲುಕಾಗಿದೆ. ಕೇಂದ್ರಕ್ಕೆ ಮೂರು ವರ್ಷಗಳಾಗಿದ್ದು 20 ಅಭ್ಯಾಸಿಗಳನ್ನು ಹೊಂದಿದೆ. ಬೆಂಗಳೂರಿನ ಪ್ರಶಿಕ್ಷಕರು ಹದಿನೈದು ದಿನಗಳಿಗೊಮ್ಮೆ ಈ ಕೇಂದ್ರಕ್ಕೆ ಭೇಟಿ ನೀಡುತ್ತಾರೆ

ಮಾರ್ಚ್ 23ರಂದು ಮಧುಗಿರಿಯಲ್ಲಿ ಹತ್ತಿರದ ಕೇಂದ್ರಗಳಿಗಾಗಿ ಪ್ರಾದೇಶಿಕ ಕೂಟವನ್ನು ಪೂರ್ಣದಿನದ ಕಾರ್ಯಕ್ರಮವನ್ನಾಗಿ ಆಚರಿಸಲಾಯಿತು. ಸಮೀಪದ ಕೇಂದ್ರಗಳ ಅಭ್ಯಾಸಿಗಳ ಅನುಭವಗಳ ಪರಸ್ಪರ ಹಂಚಿಕೊಳ್ಳುವಿಕೆ ಮತ್ತು ನಮ್ಮ ಪ್ರಗತಿಯಲ್ಲಿ ಗುರುಗಳ ಪಾತ್ರವನ್ನು ಅರ್ಥೈಸಿಕೊಂಡು ಗೌರವಿಸುವುದು ಹಾಗೂ ಭಂಡಾರಗಳಲ್ಲಿ ಭಾಗವಹಿಸುವುದರ ಮಹತ್ವವನ್ನು ತಿಳಿಯುವುದು ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಸರಿ ಸುಮಾರು 60 ಅಭ್ಯಾಸಿಗಳು ತುಮಕೂರು, ತಿಪಟೂರು, ಗೌರಿಬಿದನೂರು, ಮಧುಗಿರಿ ಮತ್ತು ಬೆಂಗಳೂರಿನಿಂದ ಪೂರ್ಣದಿನದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಭ್ಯಾಸಿಗಳ ಜೀವನದಲ್ಲಿ ಸುಳಿಯುವ ಸಕಾರಾತ್ಮಕ ಆತ್ಮ ತೃಪಿಯನ್ನು ಬಯಸುವುದರಲ್ಲಿ ಮುಖ್ಯ ಪಾತ್ರ ವಹಿಸುವ ಇಂತಹ ಕೂಟಗಳ ಪ್ರಾಮುಖ್ಯತೆಯನ್ನು ವಿಸ್ತರಿಸಲಾಯಿತು. ಅಭ್ಯಾಸಿಗಳು ತಮ್ಮ ಕೇಂದ್ರವನ್ನು ಬಿಟ್ಟು ಪ್ರಯಾಣ ಮಾಡಿ ಇತರೆ ಸ್ಥಳಗಳಲ್ಲಿ ಗುರುಗಳನ್ನು ಭೇಟಿಮಾಡಲು ಪ್ರೋತ್ಸಾಹಿಸಲಾಯಿತು ಏಕೆಂದರೆ ಇದರಿಂದ ಅವರಿಗೆ ಸುಪ್ತ ಪ್ರಜ್ಞೆಯಲ್ಲಿ ಗುರುಗಳೊಡನೆ ಸಂಪರ್ಕ ಸಾಧಿಸಲು ಸಹಾಯವಾಗುತ್ತದೆ.

ಅಭ್ಯಾಸಿಗಳು ಸಹಜಮಾರ್ಗದಲ್ಲಿನ ತಮ್ಮ ಅನುಭವಗಳನ್ನು ಹಂಚಿಕೊಂಡರು ಹಾಗೂ ಗುಂಪುಗಳಲ್ಲಿ ಚರ್ಚೆ ನಡೆಯಿತು. ಅಭ್ಯಾಸಿಗಳ ಹೃದಯ ತೆರೆಯುವುದರಲ್ಲಿ, ಐಕ್ಯತೆ ಹಾಗೂ ಭ್ರಾತೃತ್ವವನ್ನು ವರ್ಧಿಸಲು ಈ ಕಾರ್ಯಕ್ರಮವು ಸಹಕಾರಿಯಾಯಿತು.

ಈ ಸಮಾರಂಭದೊಡನೆಯೇ ಮುಕ್ತ ಸಭೆಯನ್ನು ಏರ್ಪಡಿಸಲಾಗಿದ್ದು ಮಧುಗಿರಿಯ ಸುಮಾರು 25 ಜನರು ಹಾಜರಿದ್ದರು. ಬಹುತೇಕ ಜನರು ಅಭ್ಯಾಸಿಗಳ ಬಾಳಸಂಗಾತಿಗಳು ಮತ್ತು ಕುಟುಂಬದ ಸದಸ್ಯರೂ ಆಗಿದ್ದರು. ಸಹೋದರ ಡಾ. ಕೃಷ್ಣಮೂರ್ತಿ ಮತ್ತು ಸ.ಅಮರ್‌ನಾಥ್‌ರವರು ಈ ಮುಕ್ತ ಸಭೆಯನ್ನು ನಿರ್ವಹಿಸಿದರು ಹಾಗೂ ಆಹ್ವಾನಿತರ ಪ್ರಶ್ನೆಗಳಿಗೆ ಸ್ಪಷ್ಟೀಕರಣ ನೀಡಿದರು.





## ಬೋಧಕರ ಅಭಿವೃದ್ಧಿ ಕಾರ್ಯಕ್ರಮ



SMRITIಯ ಈ ಹೊಸಹೆಜ್ಜೆಯ ಉದ್ದೇಶವು ಸಹಜಮಾರ್ಗದ ಬಗ್ಗೆ ಬಹಿರಂಗವಾಗಿ ಮಾತನಾಡಲು ಅಭ್ಯಾಸಿಗಳನ್ನು ತಯಾರು ಮಾಡುವುದಾಗಿದೆ.

ಈ ಪ್ರಾರಂಭಿಕ ಕಾರ್ಯಕ್ರಮದ ಭಾಗಿಗಳಾಗಿ 20 ಅಭ್ಯಾಸಿಗಳು ಮತ್ತು ಪ್ರಶಿಕ್ಷಕರನ್ನು ಗುರುತಿಸಲಾಗಿತ್ತು. ಭಾಗವಹಿಸಿದವರನ್ನು ಭಾಷೆಗಳ ಆಧಾರದ ಮೇಲೆ (ಇಂಗ್ಲೀಷ್ ಮತ್ತು ತಮಿಳು) ತಂಡಗಳನ್ನಾಗಿ ವಿಂಗಡಿಸಿ ಪ್ರತಿ ವಾರಾಂತ್ಯದಲ್ಲಿ ತರಬೇತಿಯನ್ನು ನೆರವೇರಿಸಲಾಯಿತು. ಪ್ರತಿ ಗುಂಪೂ ಎರಡು ವಾರಗಳಿಗೊಮ್ಮೆ ಸಭೆ ಸೇರಿದಾಗ ಪ್ರತಿಯಾಗಿ ಸದಸ್ಯರ ವಿಷಯಕ್ಕೆ ಹತ್ತು ನಿಮಿಷದಂತೆ ಎರಡು ವಿಷಯದ ಬಗ್ಗೆ ಮಾತನಾಡಬೇಕು. ವಿಷಯಗಳನ್ನು ಮೊದಲೇ ನಿಗದಿಪಡಿಸುವುದರಿಂದ ಸದಸ್ಯರಿಗೆ ಸಿದ್ಧಗೊಂಡು ಬರಲು ಶಕ್ಯವಾಗುತದೆ.

ಪ್ರತಿ ಭಾಷಣದ ನಂತರ ಕಾರ್ಯಕ್ರಮದ ನಿರ್ವಾಹಕರ ಅನಿಸಿಕೆಗಳು ಸದಸ್ಯರಲ್ಲಿ ಸುಧಾರಣೆ ತರಲು ಸಹಾಯಮಾಡಿತು. ಪ್ರೇಕ್ಷಕರನ್ನು ಅರ್ಥ ಮಾಡಿಕೊಳ್ಳುವುದು, ಪ್ರಸಂಗವನ್ನು ನಿಶ್ಚಯಿಸುವುದು, ಸಿದ್ಧಾಂತಗಳ ಆಳ, ವಿಷಯದ ಖಚಿತತೆ, ಸಿದ್ಧಾಂತಗಳ ಸ್ಪಷ್ಟೀಕರಣ, ಸಂಸ್ಕೃತ ಶಬ್ದಗಳ ಉಪಯೋಗ ಹೃದಯದಿಂದ ಮಾತನಾಡುವುದು, ಭಾಷಣದ ವೇಗ, ಉಚ್ಚಾರಣೆ, ಪದಪ್ರಯೋಗ, ಸಮಯ ನಿರ್ವಹಣೆಗಳು ಕಲಿಯುವವರ ಗಮನಕ್ಕೆ ತರಲ್ಪಟ್ಟ ವಿಷಯಗಳು.

ಕಾರ್ಯಕ್ರಮವು ಮೂರು ವಿಚಾರಗಳಾದ ಧ್ಯಾನ, ಶುದ್ಧೀಕರಣ ಮತ್ತು ಪ್ರಾರ್ಥನೆಯಿಂದ ಆರಂಭವಾಗಿ ನಂತರ ಆಸಕ್ತಿಕರ ವಿಷಯಗಳಾದ ಪ್ರೇಮ, ನಂಬಿಕೆ ಮತ್ತು ಸಮರ್ಪಣೆಯ ತನಕ ಮುಂದುವರೆಯಿತು. ’ಸಹಜಮಾರ್ಗವು ಸರಳ ಆದರೆ ಸುಲಭವಲ್ಲ’ವೆಂಬ ವಿಷಯವು ಆಸಕ್ತಿಯುತವಾಗಿದ್ದು ಅಭ್ಯಾಸಿಗಳು ವಿಷಯದ ಬಗ್ಗೆ ಆತ್ಮಪರೀಕ್ಷೆ ಮಾಡುವಂತಾಯಿತು. ವ್ಯಕ್ತಿಯೊಬ್ಬ ಸಹಜಮಾರ್ಗವನ್ನು ಸಾರ್ವಜನಿಕರಿಗೆ ಪರಿಚಯಿಸುತ್ತಾನೆ ಎಂಬುದರ ಬಗ್ಗೆ ಬಹಳ ಒತ್ತು ನೀಡಲಾಯಿತು. ಅದನ್ನು ಕಾರ್ಯರೂಪಕ್ಕೆ ತರಲು ಭಾಗವಹಿಸಿದವರೆಲ್ಲರಿಗೂ ಪ್ರೇಕ್ಷಕರಿಗೆ ಸಹಜಮಾರ್ಗವನ್ನು ಪರಿಚಯಿಸುವಂತೆ ಕೇಳಲಾಯಿತು.

ಕಾರ್ಯಕ್ರಮವು ಮುಂದುವರೆದಂತೆ ಸುಧಾರಣೆಗಳು ಕಂಡುಬಂದವು ಹಾಗೂ ಸದಸ್ಯರು ಮಾತನಾಡುವುದರ ಬಗ್ಗೆ ಕುರಿತು ಹೆಚ್ಚು ಸಡಿಲವಾಗಿಯೂ ಸಮಾಧಾನವಾಗಿಯೂ ಇದ್ದರು. ಬಹಳಷ್ಟು ಸದಸ್ಯರಲ್ಲಿ ಕಂಡುಬಂದ ಪ್ರಾರಂಭಿಕ ಧೈರ್ಯಹೀನತೆಯು ಮೌನವಾಗಿ ಒಪ್ಪಿಗೆಯಾಗಿ ಬದಲಾಗುವುದನ್ನು ನೋಡಲು ಸುಂದರವಾಗಿತ್ತು. ಸದಸ್ಯರು ತಮ್ಮ ಒರೆಹಚ್ಚಿ ಭಾಷಣಕಾರರಾಗಿ ಪಕ್ವವಾಗುತ್ತಿದ್ದಂತೆ ಅಭ್ಯಾಸಿ ಪ್ರೇಕ್ಷಕರು ಹಾಗೂ ಸಾರ್ವಜನಿಕರಲ್ಲಿ ಮಾತನಾಡುವ ಅವಕಾಶ ನೀಡಲಾಯಿತು. ಈ ಹೆಜ್ಜೆಗಳಿಂದ ಉದ್ಭವವಾದ ಉತ್ಸಾಹ ಮತ್ತು ಮುನ್ನಡೆಯ ಚಿನ್ಹೆಗಳು ಮತ್ತು ಸುಲಭವಾಗಿಯೂ ಇದ್ದಿತು. ಕೇಂದ್ರಗಳಲ್ಲಿ ಮಾಡಬಹುದಾದ ಈ ಕಾರ್ಯಕ್ರಮದ ಅನುಕರಣೆಯು ಹೇಗೆ ನಾವು ಮುಂದುವರೆದಂತೆ ಮಾರ್ಗವು ತೆರೆದುಕೊಳ್ಳುತ್ತಾ ಹೋಗುತ್ತದೆ ಎಂಬ ಅರ್ಥವನ್ನು ನೀಡುತ್ತಿದೆ.

## Centres of Light

### ಕೇರಳ ವಲಯಾಶ್ರಮ, ಅಲುವ

ಅಲುವಾದ ವಲಯಾಶ್ರಮವು ಕೇರಳದಲ್ಲಿ ಮಿಷನ್ನಿನ ಮೊದಲ ಆಶ್ರಮವಾಗಿದೆ. ಮತ್ತು 23 ಫೆಬ್ರವರಿ 2008ರಂದು ಗುರುಗಳಿಂದ ಇದರ ಉದ್ಘಾಟನೆಯಾಯಿತು. ಈ ಸಂದರ್ಭದಲ್ಲಿ ಗುರುಗಳು 'ಕೇರಳೀಯರೇ ಎಚ್ಚೆತ್ತುಕೊಳ್ಳಿ' ಎಂದು ಹೇಳಿದರು. ಅಭ್ಯಾಸಿಯ ಜೀವನದಲ್ಲಿ ಗುರು, ಮಿಷನ್ ಮತ್ತು ಮಾರ್ಗದ ಮಹತ್ವವನ್ನು ಅವರು ವಿವರಿಸಿದರು. ಈ ಸಮಾರಂಭದಲ್ಲಿ ಕೇರಳ ಮತ್ತು ಆಸುವಾಸಿನ ರಾಜ್ಯಗಳ ಬಹುತೇಕ ಜಿಲ್ಲಾ ಅಭ್ಯಾಸಿಗಳು ಹಾಜರಿದ್ದರು. ಇದೊಂದು ರೀತಿಯಲ್ಲಿ ಕೇರಳ ಭೂಮಿಯಲ್ಲಿ ಮಿಷನ್ನಿನ ಮುನ್ನಡೆಗೆ ಕಾರಣವಾಯಿತು.




ಈ ಆಶ್ರಮದ ಕಲ್ಪನೆ ಬಂದಿದ್ದು 1955ರಲ್ಲಿ. ಇದಕ್ಕಾಗಿ ಆಯ್ದುಕೊಂಡ ಸ್ಥಳವನ್ನು ಗುರುಗಳ ಒಪ್ಪಿಗೆಯಿಂದ ಕೆಲ ಅಭ್ಯಾಸಿಗಳು ಖರೀದಿಸಿ ನಂತರ ರಸ್ತೆಗಳೊಂದಿಗೆ 55 ಜಾಗವನ್ನು ದೇಣಿಗೆಯಾಗಿ ನೀಡಿದರು. ಆನಂತರ ಆಶ್ರಮದ ಮುಂಭಾಗವನ್ನು ಕೊಳ್ಳಲಾಯಿತು ಹಾಗೂ ಈಗ 14 ಅಭ್ಯಾಸಿಗಳು ಸಂಕೀರ್ಣದಲ್ಲಿ ಸ್ವಂತ ಜಾಗವನ್ನು ಹೊಂದಿದ್ದಾರೆ. 'ಸಹಜಗ್ರಾಮ' ಎಂದು ಈಗ ಕರೆಯಲಾಗುವ ಈ ಪ್ರದೇಶದಲ್ಲಿ ಬಹಳಷ್ಟು ಅಭ್ಯಾಸಿಗಳು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ.




ಸುಮಾರು 5600 ಚದರ ಧ್ಯಾನ ಮಂದಿರವನ್ನು 117 ಎಕರೆ ಜಾಗದಲ್ಲಿ ಕಟ್ಟಲಾಗಿದೆ. ಇದರಲ್ಲಿ9 ಸುಮಾರು 1400 ಅಭ್ಯಾಸಿಗಳಿಗೆ ಸ್ಥಳಾವಕಾಶವಿದೆ. ಉತ್ಸವದ ಕಾಲಕ್ಕೆ ಸುಮಾರು 90 ಅಭ್ಯಾಸಿಗಳು ಮಲಗುವಂತಹ ಶಯನಗೃಹವಿದೆ. ಧ್ಯಾನ ಮಂದಿರದ ಸುತ್ತಲಿನ ಪ್ರದೇಶದಲ್ಲಿ ಟೆಂಟುಗಳಲ್ಲಿ ಉತ್ಸವದ ಹೊತ್ತಿನಲ್ಲಿ ಸುಮಾರು 3000 ಅಭ್ಯಾಸಿಗಳು ತಂಗಬಹುದು.

ಗುರುಗಳ ಕೋಣೆಯು ಧ್ಯಾನ ಮಂದಿರಕ್ಕೆ ಕೂಡಿಕೊಂಡಿದೆ. ಪರಿಪೂರ್ಣ ಸಾರ್ವಜನಿಕ ಅಡುಗೆಮನೆಯೂ ಇದೆ. 1000 ಚದರ ಅಡಿಯಷ್ಟು, ವಿಸ್ತಾರವಾದ ಊಟದ ಕೋಣೆ ಹೊಂದಿದ ಇದರಲ್ಲಿ ಇತರ ಸೌಲಭ್ಯಗಳೂ ಇವೆ. ಸಹೋದರ ಸಹೋದರಿಯರಿಗಾಗಿ ಶೌಚ ಮತ್ತು ಸ್ನಾನಗೃಹಗಳಿರುವ ಪ್ರತ್ಯೇಕ ವಿಭಾಗಗಳಿವೆ. ಸಂರಕ್ಷಿಸಿರುವ ಸುಂದರ ಉದ್ಯಾನವಿದೆ. ಸತ್ಸಂಗದ ಹೊತ್ತಿನಲ್ಲಿ ಮಕ್ಕಳನ್ನು ಚಟುವಟಿಕೆಇಂದಿಡಲು ಚಿಕ್ಕ ಆಟದ ಮೈದಾನವಿದೆ. ಈ ಆಶ್ರಮದಲ್ಲಿ ಅಭ್ಯಾಸಿಗಳಿಂದ ನಿರ್ವಹಣೆಗೊಳ್ಳುತ್ತಿರುವ ಹಿಂದಿ, ಇಂಗ್ಲೀಷ್, ತಮಿಳು ಮತ್ತು ಮಲಯಾಳಂ ಪುಸ್ತಕಗಳಿರುವ ಗ್ರಂಥಾಲಯವಿದೆ. ಕೇರಳ ವಲಯದಲ್ಲಿ ಕೇಂದ್ರೀಕರಣಗೊಳ್ಳುವ ಅನೇಕ ಉತ್ಸವಗಳನ್ನು ಇಲ್ಲಿ ಆಚರಿಸಲಾಗುತ್ತದೆ ಮತ್ತು ಮುಂಬರುವ ಬಾಬೂಜಿ ಮಾಹಾರಜರ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಏಪ್ರಿಲ್30ರಂದು ಅಲುವಾ ಆಶ್ರಮದಲ್ಲಿಯೇ ಆಚರಿಸಲಾಗುತ್ತಿದೆ. ಕೇರಳದ ಎಲ್ಲ ಭಾಗಗಳಿಂದ ಬರುವ ಅಭ್ಯಾಸಿಗಳು ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ.



**To subscribe to this Newsletter please visit http://www.srcm.org/centers/as/in/newsletter/index.jsp**
**For feedback, suggestions and news articles please send email to in.newsletter@srcm.org**

© 2008 Shri Ram Chandra Mission ("SRCM"). All rights reserved.
“Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.
This message may be edited for content and is intended exclusively for the members of SRCM.